Sri K. T. BHASHYAM.—I thank the Hon'ble Member.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ನಮ್ಮ ಪಂಗಡ).—ವಿದ್ಯುಚ್ಛಕ್ತಿಯನ್ನು ಒಂದು ಭಾಗಕ್ಕೆ ಕೊಟ್ಟು ಇನ್ನೊಂದು ಭಾಗಕ್ಕೆ ಬಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಟಿ. ಭಾಷ್ಯಂರವರು.—ಹೌದು; ತಾವು ಹೇಳುವುದು ಲಕ್ಕವಳ್ಳಿಯಲ್ಲಿ. ಅದು ನನಗೆ ಗೊತ್ತು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅದನ್ನು ಪೂರ್ತಿ ಮಾಡಿಸುತ್ತೀರಾ ?

ಶ್ರೀ ಕೆ. ಟಿ. ಭಾಷ್ಯಂರವರು.—ಎಷ್ಟುಬೇಗ ಆದರೆ ಅಷ್ಟು ಬೇಗ ಮಾಡಿಸುತ್ತೇವೆ.

Mr. SPEAKER.—Next question.

Supply of electricity to Kodihalli, Kolliganahalli and surrounding villages in Kankanhalli Taluk.

*Q.—15. Sri S. KARIAPPA (Bangalore District—General).—Will the Government be pleased to state :—

The steps they have taken to supply electricity to Kodihalli and the surrounding villages and Kolliganahalli and the surrounding villages in Kankanhalli Taluk ?

A.—Sri K. T. BHASHYAM (Minister for Law and Labour).—The estimates have been received and are under consideration.

ಶ್ರೀ ಎಸ್. ಕರಿಯಪ್ಪನವರು.—ಕೋಡಿಹಳ್ಳಿ ಮತ್ತು ಕೊಲ್ಲಗನಹಳ್ಳಿ ಸುತ್ತಮುತ್ತಲ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಕೇಳಿ ಎಷ್ಟು ವರ್ಷ ಆಯಿತು ?

ಶ್ರೀ ಕೆ. ಟಿ. ಭಾಷ್ಯಂರವರು.—ಯಾವಾಗ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—15 ವರ್ಷಗಳಿಂದಲೂ ಕೇಳಲಾಗುತ್ತಿದೆಯೆಂದರೆ ಒಪ್ಪುತ್ತೀರಾ ?

ಶ್ರೀ ಕೆ. ಟಿ. ಭಾಷ್ಯಂರವರು.—ಹೇಳಲಾರೆ.

ಶ್ರೀ ಎಸ್. ಕರಿಯಪ್ಪನವರು.—ಅಲ್ಲಿಂದೀಚೆಗೆ ಎಷ್ಟು ಹಳ್ಳಿಗಳಿಗೆ ಕೊಟ್ಟಿದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಕೆ. ಟಿ. ಭಾಷ್ಯಂರವರು.—ಅನೇಕ ಜಾಗಗಳಿಗೆ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಆ ಹಳ್ಳಿಗಳಿಗೆ ಬೇರೆ ಕಡೆಗಳಿಗಿಂತ ಹೆಚ್ಚು ಅವಶ್ಯಕತೆ ಇತ್ತು ಎಂಬುದು ಗೊತ್ತೆ ?

ಶ್ರೀ ಕೆ. ಟಿ. ಭಾಷ್ಯಂರವರು.—ಅಂದಾಜು ಮಾಡಿದ್ದೇವೆ. ಅಂದಾಜಿನ ಮೊಬಲಗು ಒದಗಿಸಿದ ಕೂಡಲೇ ಜಾರಿಗೆ ಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ಯಾವಯಾವ ವಿಷಯಗಳಿಗೆ ಹಣ ಕೊಟ್ಟಿದ್ದೀರಿ ?

ಶ್ರೀ ಕೆ. ಟಿ. ಭಾಷ್ಯಂರವರು.—ವ್ಯವಸಾಯಕ್ಕಾಗಿ ಉಪಯೋಗಿಸುವ ಪಂಪುಗಳು ಮತ್ತು ಕೈಗಾರಿಕೋದ್ಯಮಗಳಿಗೆ ಒದಗಿಸುವುದಕ್ಕಾಗಿ ಕೇಳಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಹೆಚ್ಚು ಆಹಾರ ಬೆಳೆಯುವ ಯೋಜನೆ ಯಶಸ್ವಿಯಾಗಬೇಕಾದರೆ ಇದನ್ನು ಜಾಗ್ರತೆ ಒದಗಿಸಬೇಕಾದಷ್ಟು ಅವಶ್ಯಕವಲ್ಲವೇ ?

ಶ್ರೀ ಕೆ. ಟಿ. ಭಾಷ್ಯಂರವರು.—ಅದು ನಿರ್ವಿವಾದ ವಾದದ್ದು.

ಶ್ರೀ ಎಸ್. ಕರಿಯಪ್ಪನವರು.—ಈಗ ಸರ್ಕಾರದ ಮುಂದೆ ಇರುವುದಕ್ಕೆ ಎಷ್ಟು ಹಣ ಮಂಜೂರು ಮಾಡುತ್ತೀರಿ ?

ಶ್ರೀ ಕೆ. ಟಿ. ಭಾಷ್ಯಂರವರು.—ಕೋಡಿಹಳ್ಳಿಗೆ 1 ಲಕ್ಷ 79 ಸಾವಿರ ರೂಪಾಯಿ ಆಗುತ್ತದೆ. ಕೊಲ್ಲಗನಹಳ್ಳಿಗೆ 70 ಸಾವಿರ ರೂಪಾಯಿ ಆಗುತ್ತದೆ. ಕೈಗೆ ದುಡ್ಡು ಬಂದಕೂಡಲೇ ಕೆಲಸ ಮಾಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ಇಪ್ಪೆರಡರ ಪೈಕಿ ಕಡಿಮೆಯಿರುವುದನ್ನಾದರೂ ಮೊದಲು ತೆಗೆದುಕೊಳ್ಳಕೂಡದೇ ?

ಶ್ರೀ ಕೆ. ಟಿ. ಭಾಷ್ಯಂರವರು.—ಯಾವುದೂ ಅಷ್ಟೆ; 1,70,000 ಎನ್ನುವುದೇನೂ ಕಮ್ಮಿ ಮೊಬಲಗಲ್ಲ !

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತಲೂ ಕೋಲಾರ ಡಿಸ್ಟ್ರಿಕ್ಟ್‌ಗೆ ಹೆಚ್ಚು ವಿದ್ಯುಚ್ಛಕ್ತಿ ಕೊಟ್ಟಿದೆಯಲ್ಲವೇ ?

ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಬಾಕಿ ಡಿಸ್ಟ್ರಿಕ್ಟ್‌ಗಳಿಗೂ ಇದೇರೀತಿ ಕೊಟ್ಟಿದ್ದೀರಾ ?

ಶ್ರೀ ಕೆ. ಟಿ. ಭಾಷ್ಯಂರವರು.—ಬಾಕಿ ಡಿಸ್ಟ್ರಿಕ್ಟ್‌ಗಳಿಗೂ ಕೊಟ್ಟಿದೆ.

Mr. SPEAKER.—Question-time is over.

Reference to misquotation in certain paper *re* : walk-out incident.

Mushir-ul-Mulk J. MAHOMED IMAM (Chitaldrug *cum* Tumkur—Muslim).—Before proceeding further, I want to say something. Yesterday, when we walked out, the statement I made according to the official report is, "without meaning any disrespect to the Chair, just to show our displeasure to the policy adopted by Government, myself and the members of my party walk out." But it is slightly misquoted in the Deccan Herald. It is stated there, ".....protesting against the Speaker's Ruling is out of order....." In another Kannada Daily it is said, "ನಿಲುವಳಿ ನೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದ್ದಕ್ಕಾಗಿ ಸಭಾತ್ಯಾಗ ಮಾಡಿದರು ಎಂದು." Perhaps they did not catch my point clearly. I do not impute any motives to them. But I request the concerned papers to kindly correct their versions.